# ಸಾವನ್ನು ಗೆಲ್ಲುವ ಕವಿತೆ

ನೀರಿನ ನಿಶ್ಚಲ ಹಾಳೆ. ಸರಳದಷ್ಟು ಜಟಿಲ ಇನ್ನೊಂದಿಲ್ಲ. ಬೆರಳು ತಾಕಿಸಿದರೆ ಒಳಗೆಳೆದುಕೊಳ್ಳುತ್ತದೆ. ನಲವತ್ತೊಂದು ಮತ್ತೆ ಇನ್ನೆರಡು ಕವಿತೆ. ಒಂದೊಂದೂ ಕವಿತೆ ಒಂದೊಂದು ಕಡಲು. ಇನ್ನಿಲ್ಲವಾದ ಅಪ್ಪ ಕವಿಯಲ್ಲಿ, ಕವಿಯ ಮುಖಾಂತರ ಭಾಷೆಯಲ್ಲಿ ಸಾವಿನಿಂದ ಬಿಡುಗಡೆ ಪಡೆದು ಮತ್ತೆ ಹುಟ್ಟುವ ಕಾವ್ಯ ಪವಾಡ ಇಲ್ಲಿದೆ. ಕವಿ ತನಗೆ ತಾನೇ ಹೇಳಿಕೊಂಡ ಮಾತು ಅಕಸ್ಮಾತ್ ನನ್ನ ಕಿವಿಗೂ ಬಿದ್ದು ನಾನೂ ನನ್ನ ಇನ್ನಿಲ್ಲವಾದ ಅಪ್ಪನನ್ನು ನನ್ನೊಳಗೆ ಮತ್ತೆ ಹುಟ್ಟಿಸಿಕೊಳ್ಳುವಂತಾಯಿತು. ಇಲ್ಲಿರುವ ನಲವತ್ತೊಂದೂ ನಿಜವಾಗಿ ಒಂದೇ ಕವಿತೆ, ವಿಷಾದ ದುಃಖದ ಕತ್ತಲಲ್ಲಿ ಮಿಂಚಿ, ಅಪ್ಪನ ಮತ್ತು ನನ್ನ ಬದುಕಿನಲ್ಲಿ ಆದ ಅನುಭವಗಳು ಒಂದೊಂದು ಕ್ಷಣ ಒಂದೊಂದರ ಹಾಗೆ ಝುಗ್ಗನೆ ಬೆಳಗಿ, ಶಾಶ್ವತ ಮರವೆಗೆ ಸಲ್ಲಬಹುದಾಗಿದ್ದ ಸಂಗತಿಯೆಲ್ಲ ಮತ್ತೆ ಮಿಂಚಿನ ಬೆಳಕಲ್ಲಿ ಜೀವಪಡೆದು ಮಿರುಗಿದವು.




ಕ್ಯಾಪ್ಟನ್ ಕವಿತೆಗಳು
ಲೇ: ತೇಜಶ್ರೀ
ಪ್ರ: ಪಲ್ಲವ ಪ್ರಕಾಶನ,
ಚನ್ನಪಟ್ಟಣ, ಬಳ್ಳಾರಿ

'ಅಂತರದಲ್ಲಿ ನಿಂತು ರೂವಾರಿಯು ನೋಡುವ ಹಾಗೆ ತನ್ನದೇ ಕೃತಿಯನ್ನು ನೋಡುತ್ತಿದ್ದೆ ನೀನು.' ಹಾಗೆ ನೋಡುವುದು ಅಪ್ಪನೂ ಹೌದು, ಅಪ್ಪನನ್ನು ಕವಿತೆಯಲ್ಲಿ ಸೃಷ್ಟಿಸಿದ ಜೀವವೂ ಹೌದು. ಗಾಢ ದುಃಖದಲ್ಲಿ ಲೀನವೂ ಹೌದು, ದುಃಖದಿಂದ ಸ್ವಲ್ಪ ದೂರ ನಿರ್ಲಿಪ್ತ ನಿಂತು ನೋಡುವ ಶಿಲ್ಪಿಯೂ ಹೌದು.

'ಯಾವುದೋ ಮುಖ,
ಎಂದೋ ಜರುಗಿದ ಘಟನೆ,
ಅಕಾರಣ ಧುತ್ತನೆ ಹಾದು ಹೋಗುವಂತೆ ಮನಸ್ಸನ್ನು
ಸಾವು ನಮ್ಮೆದುರು ನಿಂತಿತ್ತು ಅಂದು.'

ಬದುಕಿನ ಕ್ಷಣಕ್ಕೆ ಅರ್ಥ ಬರುವುದೇ ಸಾವಿನಿಂದ. ನಿಶ್ಚಲ ನಿಂತ ನೀರಿನಲ್ಲಿ ಸ್ವಲ್ಪ ಚಲನೆ, ಸ್ವಲ್ಪ ಸದ್ದು, ಮತ್ತೆ ನೀರವ ಮೌನ. ಕವಿತೆ ಸಾವನ್ನು ಗೆಲ್ಲುತ್ತ ವಿಷಾದದಲ್ಲಿ ಅದ್ದಿಕೊಂಡು, ನಮ್ಮನ್ನೂ ಅದ್ದಿ, ಮತ್ತೆ ಮೇಲೆದ್ದು ಮೌನ.

ಈ ಕವಿತೆ ಚೆನ್ನಾಗಿದೆ ಅಂದರೆ ಏನೂ ಹೇಳಿದಂತಲ್ಲ. ಇಂಥ ಕವಿತೆಗೆ ಪ್ರಚಾರ ಕೊಡಬಾರದು, ಓದುಗರು ತಾವೇ ಕಂಡುಕೊಂಡು ಅನುಭವಿಸಬೇಕು ಅನ್ನಿಸಿದರೂ ಓದಿ ಮೆಚ್ಚಿದ್ದನ್ನು ಹೇಳದೆ ಇರಲಾಗಲಿಲ್ಲ. ಏನೋ ಆಗಿ, ಹೇಳಬೇಕು, ಹೇಳಿ ಅರ್ಥವಿಲ್ಲ, ಸುಮ್ಮನಿರಬೇಕು, ಸುಮ್ಮನಿರಬಾರದು ಹೀಗೆ ಏನು ಮಾಡಿದರೂ ಮಾಡಿದಂತಲ್ಲ ಅನ್ನಿಸುವಂಥ ಕವಿತೆಯಲ್ಲಿ ಮಾತ್ರ ಆಗುವ ಅನುಭವ ನೀಡಿದ ಕವಿತೆಗೆ ನಮಸ್ಕಾರ.

● ಓ.ಎಲ್. ನಾಗಭೂಷಣ ಸ್ವಾಮಿ